**ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ ನ್ಯಾಯಾಲಯ**

**ಕೆ.ಆರ್.ನಗರ**

**ಸಿ.ಸಿ.1229/2017**

**ಪಿಡಬ್ಲ್ಯೂ-1**

**ಸಿಡಬ್ಲ್ಯೂ-1**

| | | |
|---|---|---|
| ಸಾಕ್ಷಿದಾರರ ಹೆಸರು | - | ರಾಮನಾಯಕ |
| ತಂದೆಯ ಹೆಸರು | - | ಲೇಟ್ ರಾಮನಾಯಕ |
| ವಯಸ್ಸು | - | 45 ವರ್ಷ |
| ಕೆಲಸ | - | ಹೆಚ್ ಸಿ, ಬಿಳಿಗೆರೆ ಠಾಣೆ |
| ವಾಸ | - | ನಂಜನಗೂಡು |

**ದಿನಾಂಕ 19-08-2019 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು. ಮುಖ್ಯ ವಿಚಾರಣೆ ಮಾನ್ಯ ಎಪಿಪಿಯವರಿಂದ**

ಮೇ 2015 ರಿಂದ ಪೆಬ್ರವರಿ 2017 ವರೆಗೆ ಪೋಲೀಸ್ ಕಾನ್ಸಟೇಬಲ್ ಆಗಿ ಕೆ ಆರ್ ನಗರ ಪೋಲೀಸ್ ಠಾಣೆಯಲ್ಲಿ ಕಾರ್ಯನಿರ್ವಹಿಸಿರುತ್ತೇನೆ.

ದಿ:25.12.2016 ರಂದು ನನಗೆ ಮತ್ತು ಚಾಸಾ 2 ಮತ್ತು 3 ರವರಿಗೆ ಡೋರನಹಳ್ಳಿ ಗ್ರಾಮದ ಸಂತ ಆಂಥೋನಿ ಚರ್ಚ ಹತ್ತಿರ ಕ್ರಿಸ್ಮಸ್ ಹಬ್ಬದ ಪ್ರಯುಕ್ತ ಸಾಂಸ್ಕೃತಿಕೆ ಕಾರ್ಯಕ್ರಮ ಇದುದ್ದರಿಂದ ನಮ್ಮನ್ನು ಕರ್ತವ್ಯಕ್ಕೆ ನೇಮಕ ಮಾಡಿದ್ದರು.

ಸಂಜೆ 6.00 ಗಂಟೆ ಸಮಯದಲ್ಲಿ ಚರ್ಚ್ ಮುಂಭಾಗದ ಆವರಣದಲ್ಲಿ ಕಾರ್ಯಕ್ರಮ ನಡೆಯುತ್ತಿರುವಾಗ ಇಬ್ಬರು ಹುಡುಗರು ಅವಾಚ್ಯ ಶಬ್ದಗಳಾದ ಬಾಲ ಬಾಷೆಗಳಿಂದ ಕೇಕೆ ಹಾಕಿ ಜೋರಾಗಿ ಕೂಗಾಡುತ್ತಿದ್ದರು. ಇದರಿಂದ ಭಕ್ತಾದಿಗಳಿಗೆ ಮುಜುಗರವಾಗಿ ಆತಂಕದಿಂದ ನಿಂತಿದ್ದರು. ಆದ್ದರಿಂದ ನಾನು, ಚಾಸಾ 2 ಮತ್ತು 3 ರವರು ಅಲ್ಲಿಗೆ ಹೋದೆವು.

ನಂತರ ಆ ಇಬ್ಬರು ವ್ಯಕ್ತಿಗಳು ನಮ್ಮನ್ನು ನೀವು ಯಾಕೆ ಬಂದಿರಿ ಇದು ನಮ್ಮ ಊರು ಎಂದು ತಳ್ಳಾಡಿ ಬೋಳಿ ಮಕ್ಕಳಾ ಎಂದು ಹೇಳಿ ಬೈದಾಡಿದರು. ಇದರಿಂದ ನಮಗೆ ಸರ್ಕಾರಿ ಕೆಲಸಕ್ಕೆ ಅಡ್ಡಿಯಾಯಿತು.

ನಂತರ ಚಾಸಾ 4 ಮತ್ತು 5 ರವರು ಬಂದು ಸದರಿ ಜಗಳವನ್ನು ಬಿಡಿಸಿ ಸಮಾದಾನ ಮಾಡಿದರು. ನಂತರ ಆ ಇಬ್ಬರು ಹುಡುಗರ ಹೆಸರು ವಿಚಾರಿಸಿದಾಗ ಒಬ್ಬರ ಹೆಸರು ಶರತ್

ಹಾಗೂ ಇನ್ನೊಬ್ಬ ಆಂಥೋನಿ ರಾಜ್ ಎಂದು ತಿಳಿದುಬಂತು. ನಂತರ ಅವರಿಬ್ಬರನ್ನು ವಶಕ್ಕೆ ಪಡೆದುಕೊಂಡು ಠಾಣೆಗೆ ಕರೆದುಕೊಂಡು ಬಂದು ದೂರು ದಾಖಲಿಸಿರುತ್ತೇನೆ.

ಸದರಿ ದೂರನ್ನು ನೋಡಿ ಸಾಕ್ಷಿ ಗುರುತಿಸಿದ್ದರಿಂದ ಅದನ್ನು ನಿಪಿ 1 ಎಂದು, ಸಾಕ್ಷಿಯ ಸಹಿಯನ್ನು ನಿಪಿ 1(ಎ) ಎಂದು ಗುರುತಿಸಲಾಯಿತು.

ನಂತರ ದಿಃ26.12.2016 ರಂದು ನಾನುಮತ್ತು ಚಾಸಾ 7 ಮತ್ತು 8 ಘಟನಾ ಸ್ಥಳಕ್ಕೆ ಬಂದು ಮಹಜರ್ ಮಾಡಿದೆವು. ಸದರಿ ಸ್ಥಳವನ್ನು ನಾನು ತೋರಿಸಿರುತ್ತೇನೆ. ಸದರಿ ಮಹಜರನ್ನು ಬೆಳಿಗ್ಗೆ 8.00 ರಿಂದ 9.00 ಗಂಟೆಯ ವರೆಗೆ ಮಾಡಿದ್ದು ಸದರಿ ಸ್ಥಳದ ಚೆಕ್ಕು ಬಂದಿ ಪೂರ್ವಕ್ಕೆ ಚರ್ಚ್ನ ಮುಖ್ಯ ದ್ವಾರ, ಪಶ್ಚಿಮಕ್ಕೆ ಡೋರನಹಳ್ಳಿ ಮತ್ತು ಕೆ ಆರ್ ನಗರ ಮುಖ್ಯ ರಸ್ತೆ, ಉತ್ತರಕ್ಕೆ ಖಾಸಗೀ ಕಟ್ಟಡಗಳು ಮತ್ತು ದಕ್ಷಿಣಕ್ಕೆ ಒಂದು ಗ್ರಾಮಕ್ಕೆ ಹೋಗುವ ದಾರಿ.

ಸದರಿ ಮಹಜರ್ಗೆ ಚಾಸಾ 7 ಮತ್ತು 8 ರವರು ನನ್ನ ಸಮಕ್ಷಮ ಸಹಿ ಮಾಡಿರುತ್ತಾರೆ. ಸದರಿ ಮಹಜರನ್ನು ನೋಡಿ ಸಾಕ್ಷಿ ಗುರುತಿಸಿದ್ದರಿಂದ ಅದನ್ನು ನಿಪಿ 2 ಎಂದು, ಸಾಕ್ಷಿಯ ಸಹಿಯನ್ನು ನಿಪಿ 2(ಎ) ಎಂದು ಗುರುತಿಸಲಾಯಿತು.

ನಂತರ ಸದರಿ ಸ್ಥಳದಲ್ಲಿ ಸ್ಕೆಚ್ಚನ್ನು ತಯಾರಿಸಿರುತ್ತೇವೆ. ಸದರಿ ಸ್ಕೆಚ್ಚನ್ನು ನಿಪಿ 3 ಎಂದು ಗುರುತಿಸಲಾಯಿತು. ನ್ಯಾಯಾಲಯದ ಮುಂದೆ ಇರುವ ಆರೋಪಿತರನ್ನು ನೋಡಿ ಗುರುತಿಸಿರುತ್ತಾರೆ. ಸದರಿ ಗಲಾಟೆಯಿಂದ ನಮಗೆ ಸರ್ಕಾರಿ ಕೆಲಸಕ್ಕೆ ಅಡ್ಡಿ ಉಂಟಾಗಿರುತ್ತದೆ.

**<u>ಪಾಟೀ ಸವಾಲು: ಶ್ರೀ. ಕೆ ಎನ್ ಎಸ್ ವಕೀಲರಿಂದ ಆರೋಪಿ ಪರ ವಕೀಲರುಃ</u>**

ನನ್ನೊಂದಿಗೆ ಸದರಿ ದಿನ ಕರ್ತವ್ಯ ನಿರ್ವಹಣೆಗೆ ಚಾಸಾ 2 ಮತ್ತು 3 ರವರಿಗೂ ಕೂಡ ನೇಮಿಸಿದ್ದರು. ಸಾಮಾನ್ಯವಾಗಿ ಸಬ್ ಇನ್ಸಪೆಕ್ಟರ್ ಇವರು ನಾವು ನಿಯೋಜಿತ ಸ್ಥಳಕ್ಕೆ ಹೋಗುವ ಮುನ್ನ ಯಾವ ಸ್ಥಳಕ್ಕೆ ನಿಯೋಜಿಸಲಾಗಿದೆ ಎನ್ನುವ ಬಗ್ಗೆ ಠಾಣಾ ರಿಜಿಸ್ಟರ್ನಲ್ಲಿ ನಮೂದು ಮಾಡುತ್ತಾರೆ.

ಸದರಿ ದಿನ ಚರ್ಚ್ ಹತ್ತಿರ ಸಾಂಸ್ಕೃತಿಕ ಕಾರ್ಯಕ್ರಮ ಆಗುತ್ತಿತ್ತು. ಅಲ್ಲಿ ಸುಮಾರು 500 ಕ್ಕಿಂತ ಹೆಚ್ಚು ಜನರು ಭಾಗವಹಿಸಿದ್ದರು. ಸದರಿ ಬಂದೋಬಸ್ತ ಕಾರ್ಯಕ್ಕೆ ನಾವು 3 ಜನರನ್ನು ಮಾತ್ರ ನೇಮಕ ಮಾಡಲಾಗಿತ್ತು.

ಅಲ್ಲಿ ಸಿಸಿ ಕ್ಯಾಮಾರವನ್ನು ಅಳವಡಿಸಲಾಗಿತ್ತೊ ಇಲ್ಲವೋ ಎನ್ನುವ ಬಗ್ಗೆ ನನಗೆ ಮಾಹಿತಿ ಇರುವುದಿಲ್ಲ. ಗಲಾಟೆ ಸಮಯದಲ್ಲಿ ಒಂದು ಗುಂಪು ಸೇರಿಕೊಂಡಿತ್ತು. ಅಲ್ಲಿ ಯಾವ ಯಾವ ಸಾಂಸ್ಕೃತಿಕ ಕಾರ್ಯಕ್ರಮಕ್ಕೆ ಯಾರು ಯಾರು ಅಡ್ಡಿ ಪಡಿಸಿದರು ಎಂದರೆ ಸಾಕ್ಷಿಯು ಸದರಿ ಆರೋಪಿಗಳೇ ಎಂದು ನುಡಿಯುತ್ತಾರೆ. ಸದರಿ ಸಮಯದಲ್ಲಿ ನಾವು ನಮ್ಮ ಇಲಾಖಾ

ಸಮವಸ್ತ್ರದಲ್ಲಿ ಇದ್ದೆವು.

ಸದರಿ ಘಟನೆಯ ನಂತರ ಸಾಂಸ್ಕೃತಿಕ ಕಾಯರ್ಕ್ರಮಗಳು ಸಮಾಪ್ತಿಯಾದ ನಂತರ ನಾವು ಠಾಣೆಗೆ ಹೋದೆವು. ಸದರಿ ಘಟನೆಯಲ್ಲಿ ನಾನು ತೊಟ್ಟಿರುವ ಉಡುಗೆಯಾಗಲೀ ಇನ್ನಿತರೇ ವಸ್ತುಗಳೇ ಆಗಲೀ ಯಾವುದೇ ದಕ್ಕೆಯಾಗಿರುವುದಿಲ್ಲ ಸಾಕ್ಷಿ ಮುಂದುವರೆದು ನಮ್ಮನ್ನು ತಳ್ಳಾಡಿರುತ್ತಾರೆ ಎಂದು ನುಡಿಯುತ್ತಾರೆ.

ಸದರಿ ತಳ್ಳಾಟದ ನಂತರ ನನಗೆ ನನ್ನ ಕರ್ತವ್ಯ ನಿರ್ವಹಿಸುವುದರಲ್ಲಿ ತೊಂದರೆ ಆಗಿರುತ್ತೆದೆ. ಸದರಿ ಘಟನೆಯಲ್ಲಿ ನಮ್ಮ ಸಮವಸ್ತ್ರಕ್ಕೆ ದಕ್ಕೆ ತರುವುದಾಗಲೀ ಅಥವಾ ನಮ್ಮ ಟೋಪಿಯನ್ನು ಕೆಡವುದಾಗಲೀ ಅಥವಾ ದೊಣ್ಣೆಯನ್ನು ಮುರಿಯುವುದಾಗಲೀ ಯಾವುದೇ ಘಟನೆ ಆಗಿರುವುದಿಲ್ಲ.

ಸದರಿ ತಳ್ಳಾಟದಿಂದ ನನಗೆ ಯಾವುದೇ ತೀವ್ರಸ್ವರೂಪದ ಗಾಯಗಳು ಆಗಿರುವುದಿಲ್ಲ. ನಮ್ಮನ್ನು ನೂಕಾಡಿದನ್ನು ಸಾರ್ವಜನಿಕರು ನೋಡಿರುತ್ತಾರೆ ಆದರೆ ನಿರ್ಧಿಷ್ಟವಾಗಿ ಅವರ ಹೆಸರುಗಳನ್ನು ಹೇಳಲಾಗುವುದಿಲ್ಲ.

ನಂತರ ಆರೋಪಿ ಇವರಿಗೆ ಪೋಲೀಸರಿಗೆ ತೊಂದರೆ ಕೊಡಬೇಡಿ ಎಂದು ಸಾರ್ವಜನಿಕರಾದ ಶರತ್ ಮತ್ತು ದರ್ಶನ್ ಇವರು ಮದ್ಯಸ್ಥಿಕೆ ಮಾಡಿರುತ್ತಾರೆ. ನನ್ನನ್ನು ಹೊರತು ಪಡಿಸಿ ನನ್ನೊಂದಿಗಿದ್ದ ಇಬ್ಬರು ಸಿಬ್ಬಂದಿಗಳಿಗೂ ಸಹ ತೊಂದರೆ ನೀಡಿದ್ದು ಆದರೆ ಬಟ್ಟೆ ಹರಿಯುವುದಾಗಲೀ ಇನ್ನಿತರೇ ಘಟನೆಯಾಗಿರುವುದಿಲ್ಲ.

ಆರೋಪಿತರು ಸಾರ್ವಜನಿಕರಿಗೆ ಬಾಲ ಬಾಷೆ ಇಂದ ಬೈಯುತ್ತಿದ್ದು ನಾವು ಅಲ್ಲಿಗೆ ಹೊದಾಗ ನಮ್ಮನ್ನು ಕೂಡ ಅದೇ ಬಾಷೆಯಲ್ಲಿ ಬೈದಿರುತ್ತಾರೆ. ಸದರಿ ಸಾರ್ವಜನಿಕರಿಂದ ಬೈಯುತ್ತಿದ್ದರ ಬಗ್ಗೆ ದೂರು ಬಂದಿರುವುದಿಲ್ಲ. ಸಾಕ್ಷಿ ಮುಂದುವರೆದು ಸದರಿ ಘಟನಾ ಸ್ಥಳದಲ್ಲಿ ನಾವು ಇದ್ದೆವು ಎಂದು ನುಡಿಯುತ್ತಾರೆ.

ಸದರಿ ಪ್ರಕರಣದ ದೂರನ್ನು ನಾನೇ ನನ್ನ ಸ್ವಅಕ್ಷರದಲ್ಲಿ ಬರೆದು ನೀಡಿರುತ್ತೇನೆ. ನನ್ನ ದೂರಿನಲ್ಲಿ ಕೆಲವೊಂದು ಬೈಗಳಗಳನ್ನು ಮಾತ್ರ ನಮೂದಿಸಿದ್ದು ಎಲ್ಲವನ್ನು ಹೇಳಲಾಗುವುದಿಲ್ಲ ಎಂದು ನುಡಿಯುತ್ತಾರೆ. ನನಗೆ ಸದರಿ ದಿನದಂದು ಮಾತ್ರ ಘಟನಾ ಸ್ಥಳದಲ್ಲಿ ಕರ್ತವ್ಯ ನಿರ್ವಹಣೆಗಾಗಿ ನೇಮಕ ಮಾಡಿರುತ್ತಾರೆ.

ನಾನು ಆರೋಪಿತರನ್ನು ಸದರಿ ಘಟನೆ ನಡೆಯುವ ಮುನ್ನ ಘಟನಾ ಸ್ಥಳದಲ್ಲಿ ಓಡಾಡುತ್ತಿದುದ್ದನ್ನು ನೋಡಿರುತ್ತೇನೆ. ನನ್ನ ದೂರಿನಲ್ಲಿ ಈ ಬಗ್ಗೆ ನಮೂದಿಸಿರುವುದಿಲ್ಲ. ಸದರಿ ಘಟನೆಗೆ ಮುನ್ನ ಸಾರ್ವಜನಿಕರಿಂದ ಯಾರೋ ಹುಡುಗರು ಅಡ್ಡಾದಿಡ್ಡಿಯಾಗಿ ಓಡಾಡುತ್ತಿದ್ದರು

ಎನ್ನುವ ಬಗ್ಗೆ ದೂರು ಬಂದಿದ್ದು ಆದರೆ ನಿಖರವಾಗಿ ಆರೋಪಿತರೇ ಎನ್ನುವ ಬಗ್ಗೆ ಇರುವುದಿಲ್ಲ.

ಸದರಿ ಘಟನಾ ಸಮಯದಲ್ಲಿ ಆರೋಪಿತರು ಯಾವ ಬಣ್ಣದ ಬಟ್ಟೆ ಧರಿಸಿದ್ದರು ಎನ್ನುವುದನ್ನು ಹೇಳಲಾಗುವುದಿಲ್ಲ.

ಘಟನೆ ನಡೆದ ಮಾರನೇ ದಿನ ಮಹಜರ್ಗೆ ನನ್ನೊಂದಿಗೆ ಇನ್ನಿಬ್ಬರು ಸಾಕ್ಷಿಗಳು ಸಹಿ ಮಾಡಿರುತ್ತಾರೆ. ನಾನು ನನ್ನ ಸಾಕ್ಷಿಯಲ್ಲಿ ಮಹಜರ್ಗೆ ನನ್ನೊಂದಿಗೆ ಇನ್ನಿಬ್ಬರು ಸಾಕ್ಷಿಗಳು ಸಹಿ ಮಾಡಿರುತ್ತಾರೆ ಎಂದು ಹೇಳಿದ್ದು ಇರುತ್ತದೆ. ಸದರಿ ಘಟನಾ ಸ್ಥಳದಲ್ಲಿ ಒಂದು ಸ್ಥಳದಲ್ಲಿ ವೇದಿಕೆ ಇಲ್ಲದೇ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ನಡೆಸಿರುತ್ತಾರೆ.

ನಮಗೆ ಕರ್ತವ್ಯ ನಿಯೋಜಿಸಲು ನೇಮಕ ಮಾಡಿದ ಸ್ಥಳದಲ್ಲಿ ಆರೋಪಿತರು ನಮಗೆ ಕರ್ತವ್ಯ ನಿರ್ವಹಣೆಗೆ ಯಾವುದೇ ರೀತಿಯ ಅಡ್ಡಿ ಪಡಿಸಿರುವುದಿಲ್ಲ ಅಡ್ಡಿ ಪಡಿಸಿದರು ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ನನಗೆ ಸದರಿ ಘಟನೆಯಲ್ಲಿ ನನ್ನ ಸಮವಸ್ತ್ರ ಯಾವುದೇ ರೀತಿಯಿಂದ ಘಾಸವಾಗಿರುವುದಿಲ್ಲ ಒಂದು ವೇಳೆ ಆರೋಪಿತರು ಹಾಗೆ ಅಡ್ಡಿ ಪಡಿಸಿದ್ದರೇ ನಮ್ಮ ಸಮವಸ್ತ್ರಗಳಿಗೆ ಘಾಸವಾಗುತ್ತಿತ್ತು ಎಂದರೆ ಸರಿಯಲ್ಲ.

ನಾನು ಘಟನೆ ನಡೆದ ಮಾರನೆ ದಿನ ಘಟನಾ ಸ್ಥಳಕ್ಕೆ ಹೋಗಿ ಯಾವುದೇ ಮಹಜರಿಗೆ ಸಹಿ ಮಾಡಿರುವುದಿಲ್ಲ ಹಾಗೂ ಠಾಣೆಯಲ್ಲಿ ಕೂಳಿತುಕೊಂಡು ಮಹಜರ್ ತಯಾರಿಸಿರುತ್ತೇನೆ ಎಂದರೆ ಸರಿಯಲ್ಲ. ನಾನು ಹಳೇ ದ್ವೇಷದಿಂದ ಆರೋಪಿತರ ವಿರುದ್ದ ಸುಳ್ಳು ಪ್ರಕರಣವನ್ನು ದಾಖಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

<u>ಮರು ವಿಚಾರಣೆ</u> - ಇರುವುದಿಲ್ಲ

**(ನನ್ನ ಉಕ್ತ ಲೇಖನದ ಮೇರೆಗೆ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)**

ಓ ಹೇ ಕೇ ಸ ಇದೆ ಎಂ

(ಗಾಯತ್ರಿ)
ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು,
ಮತ್ತು ಪ್ರದನ್ಯಾದಂ., ಕೆ.ಆರ್.ನಗರ